ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಯಲಹಂಕ, ಬೆಂಗಳೂರು–64

ದಿನಾಂಕ:28/1/2017

ವಿಷಯ: ಸಾರ್ವಜನಿಕ ಆಸ್ಪತ್ರೆ, ಯಲಹಂಕ ಓಲ್ಡ್ ಟೌನ್, ಬೆಂಗಳೂರು ಇಲ್ಲಿಗೆ ತುರ್ತು ಅಗತ್ಯವಿರುವ ಕಾಮಗಾರಿಗಳ ವಿವರ.

ಉಲ್ಲೇಖ: 1)ಈ ಆಸ್ಪತ್ರೆಯ ಸಮ ಸಂಖ್ಯೆ ಪತ್ರ ದಿ:5/12/2016.

2)HFW/KHSDRP/CE/TA-3/AE-1/GH-Yelahanka/LOA/2016-17, dt:29/12/2016.

3)ದಿ:5/12/2016ರಂದು ಮಾನ್ಯ ಶಾಸಕರು ಸಾರ್ವಜನಿಕ ಆಸ್ಪತ್ರೆ ಯಲಹಂಕ ಇಲ್ಲಿ ನಡೆಸಿದ ಚರ್ಚೆಯ ಅನುಸಾರ.

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ (1) ಪತ್ರದಲ್ಲಿ ಆಸ್ಪತ್ರೆಯ ತುರ್ತು ಕಾಮಗಾರಿಗಳ ಕುರಿತು ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆದರೆ ಉಲ್ಲೇಖ (2)ರ ಪತ್ರದಲ್ಲಿ **KHSDRP** ವತಿಯಿಂದ ಆಸ್ಪತ್ರೆಯ 3ನೇ ಮಹಡಿ ನಿರ್ಮಾಣ ಕಾರ್ಯ ಮತ್ತು ಆಸ್ಪತ್ರೆಯ ನವೀಕರಣ ಕಾಮಗಾರಿಗೆ ಮಂಜೂರಾತಿ ನೀಡಲಾಗಿರುತ್ತದೆ. ಆದುದರಿಂದ ಅದರಲ್ಲಿನ ಕಾಮಗಾರಿಗಳನ್ನು ಹೊರತುಪಡಿಸಿ ತುರ್ತಾಗಿ ಅಗತ್ಯವಿರುವ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಈ ಮೂಲಕ ಮತ್ತೊಮ್ಮೆ ಕೋರಲಾಗಿದೆ.

ಕ್ರ.ಸಂ.	ಕಾಮಗಾರಿಗಳ ವಿವರ
1	ಆಸ್ಪತ್ರೆಯ ಸಂಪೂರ್ಣ ವಿದ್ಯುತ್ ಸಂಪರ್ಕದ ವೈರಿಂಗ್ ಬದಲಾವಣೆ ಕಾಮಗಾರಿ
2	ಆಸ್ಪತ್ರೆಯ ಓವರ್ ಹೆಡ್ ಟ್ಯಾಂಕ್‌ನಿಂದ ವಿವಿಧೆಡೆಗೆ ನೀರಿನ ಸಂಪರ್ಕವಿರುವ ಸಂಪೂರ್ಣ ಪೈಪ್‌ಗಳ ಬದಲಾವಣೆ
3	ಆಸ್ಪತ್ರೆಯ ಕೊಳವೆ ಬಾವಿ ಹಾಳಾಗಿದ್ದು, ಒಂದು ಹೊಸ ಕೊಳವೆ ಬಾವಿ ನಿರ್ಮಿಸುವ ಕಾಮಗಾರಿ

...2

4	ಆಸ್ಪತ್ರೆಯ ಬಳಕೆಯ ಸಾಮರ್ಥ್ಯಕ್ಕನುಗುಣವಾಗಿ ಒಂದು ಹೊಸ ಆಟೋಮೆಟಿಕ್ ಜನರೇಟರ್ ಅಳವಡಿಕೆ ಅಥವಾ ಪ್ರಸ್ತುತ ಇರುವ ಡಿಜಿ ಸೆಟ್‌ಗೆ ಆಟೋಮೆಟಿಕ್ ಆನ್ ಅಂಡ್ ಆಫ್ ಸಿಸ್ಟಂ ಅಳವಡಿಕೆ ಕಾಮಗಾರಿ
5	ಮಾಡ್ರನೈಸ್ಡ್ ಧೋಬಿ ರೂಂ(ಅಗತ್ಯ ಯಂತ್ರೋಪಕರಣಗೊಂದಿಗೆ).
6	ಆಸ್ಪತ್ರೆಯ ಕಟ್ಟಡದ ಎಲ್ಲಾ ಗೋಡೆಗಳನ್ನು ನೆಲದಿಂದ 6 ಅಡಿಗಳ ವರೆಗೆ ಟೈಲ್ಸ್ ಅಳವಡಿಸುವ ಹಾಗೂ ಅಗತ್ಯವಿದ್ದೆಡೆಗೆ ಆಯಿಲ್ ಪೆಯಿಂಟಿಂಗ್ ಮಾಡುವ ಕಾಮಗಾರಿ
7	ಆಸ್ಪತ್ರೆಯ ಆವರಣದಲ್ಲಿನ ಅಡುಗೆಮನೆಯ ಮೇಲ್ಚಾಗದ ಮೋದಲನೇ ಮಹಡಿಯ ಕಟ್ಟಡ ಕಾಮಗಾರಿ ಅದರಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿಗೆ ಸ್ಥಳಾವಕಾಶ ಕಲ್ಪಿಸುವುದು.
8	ಆಸ್ಪತ್ರೆಗೆ ಮಳೆ ನೀರು ಕೋಯ್ಲಿ ಪದ್ದತಿ ಅಳವಡಿಸುವ ಕಾಮಗಾರಿ
9	ಆಸ್ಪತ್ರೆ ತುರ್ತುಚಿಕಿತ್ಸಾ ವಿಭಾಗ ಹಾಗೂ 11 ಓಪಿಡಿ ವಿಭಾಗಗಳನ್ನು ನವೀಕರಿಸುವ ಕಾಮಗಾರಿ (ಒಳಾಂಗಣ ನವೀಕರಣದೊಂದಿಗೆ)/ಹಾಗೂ ಆಸ್ಪತ್ರೆಯ 2ನೇ ಮಹಡಿಯಲ್ಲಿರುವ ಕಛೇರಿ ವಿಭಾಗವನ್ನು ನೆಲಮಹಡಿಗೆ ಸ್ಥಳಾಂತರಿಸಲು ಸ್ಥಳಾವಕಾಶ ಹಾಗೂ ಕಛೇರಿ ನವೀಕರಣ (ವಿತ್ ಇಂಟಿರಿಯರ್) ನವೀಕರಿಸುವ ಕಾಮಗಾರಿ.
10	ಆಸ್ಪತ್ರೆಯ ಹಲವೆಡೆ ಬಾಗಿಲು ಹಾಗೂ ಕಿಟಕಿಗಳು ಹಾಳಾಗಿದ್ದು, ಅವುಗಳ ದುರಸ್ಥಿ, ಶೌಚಾಲಯಗಳ ದುರಸ್ಥಿ, ಹಾಗೂ ಅಗತ್ಯವಿದ್ದೆಡೆ ಹೊಸ ಬಾಗಿಲುಗಳ ಅಳವಡಿಸುವ ಕಾಮಗಾರಿ

(11) Centralized Oxigen System.

ಆಡಳಿತ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ, ಯಲಹಂಕ
ಬೆಂಗಳೂರು-64.

ಪ್ರತಿಯನ್ನು:

1. ಸನ್ಮಾನ್ಯ ಶಾಸಕರರು ಹಾಗೂ ಪೀಠಸ್ಥರು, ಆರೋಗ್ಯ ರಕ್ಷಾ ಸಮಿತಿ, ಸಾರ್ವಜನಿಕ ಆಸ್ಪತ್ರೆಯ, ಯಲಹಂಕ, ಇವರಿಗೆ ಮಾಹಿತಿಗಾಗಿ.
2. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ. ಇವರಿಗೆ ಮಾಹಿತಿಗಾಗಿ.
3. ಯೋಜನಾ ನಿರ್ದೇಶಕರು, ಕೆ.ಹೆಚ್.ಎಸ್.ಡಿ & ಅರ್.ಪಿ ಶೇಷಾದ್ರಿ ರಸ್ತೆ, ಬೆಂಗಳೂರು-560001, ಇವರಿಗೆ ಮಾಹಿತಿಗಾಗಿ.
4. ಮುಖ್ಯ ಇಂಜಿನಿಯರ್, ಕೆ.ಹೆಚ್.ಎಸ್.ಡಿ & ಅರ್.ಪಿ ಶೇಷಾದ್ರಿ ರಸ್ತೆ, ಬೆಂಗಳೂರು-560001, ಇವರಿಗೆ ಮಾಹಿತಿಗಾಗಿ.
5. ಸಹಾಯಕ ಕಾರ್ಯಪಾಲಕರ ಅಭಿಯಂತರರು, ಯೋಜನಾ ವಿಭಾಗ, ಯಲಹಂಕ ವಲಯ, ಬಿಬಿಎಂಪಿ, ಅಮೃತಹಳ್ಳಿ ರಸ್ತೆ, ಬೆಂಗಳೂರು.